**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್.ಸಿ. ಸಂಖ್ಯೆ: 79/2022**

ಫ್ರಾಸಾ .05

ಚಾಸಾ. 16

| | | |
|---|---|---|
| ಸಾಕ್ಷಿಯ ಹೆಸರು | : | ಮಥೀನ ಪೀರಜಾದೆ |
| ತಂದೆ ಹೆಸರು | : | ಇಮ್ದಾದಅಲಿ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಮುಗದ ಗ್ರಾಮ ತಾಃ ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 31-10-2025 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಮೃತ ನಾಗರಾಜ ಹರಪನಹಳ್ಳಿ ನನಗೆ ಗೊತ್ತು. ಅವನು ನನ್ನ ಗೆಳೆಯ. ಅವನು ನಾನು ಹೈಸ್ಕೂಲ ಓದುತ್ತಿದ್ದಾಗ ನನ್ನ ಜೊತೆಗೆ ಅವನು ಓದುತ್ತಿದ್ದ. ನ್ಯಾಯಾಲಯದಲ್ಲಿ ವಿಸಿ ಮೂಲಕ ಕಾಣಿಸುತ್ತಿರುವ ಆರೋಪಿಗಳಲ್ಲಿ ಚೆಕ್ಸ ಶರ್ಟ ಹಾಕಿಕೊಂಡಿರುವವನು ನವೀನ ಉಗರಗೋಳ ಎಂದು ಸಾಕ್ಷಿ ಅವನನ್ನು ಗುರುತಿಸಿರುತ್ತಾರೆ. ನ್ಯಾಯಾಲಯವು ಅವನ ಹೆಸರು ಕೇಳಿದಾಗ ಅವನು ನನ್ನ ಹೆಸರು ನವೀನ ಉಗರಗೋಳ ಎಂದು ವಿಸಿ ಮೂಲಕ ಹೇಳಿರುತ್ತಾನೆ. ನ್ಯಾಯಾಲಯದಲ್ಲಿ ಇರುವ 1 ನೇ ಆರೋಪಿ ಮಲ್ಲಿಕಾರ್ಜುನ ಕೂಡ ನನಗೆ ಗೊತ್ತು, ಅವನು ಕೂಡ ನನ್ನ ಕ್ಲಾಸಮೇಟ್ . ಆರೋಪಿ ನವೀನ ಉಗರಗೋಳ ಪೆಂಡಾಲ್ ಕೆಲಸ ಮಾಡುತ್ತಿದ್ದ. 1 ನೇ ಆರೋಪಿ ಮಲ್ಲಿಕಾರ್ಜುನ ಹೇರ್ ಕಟಿಂಗ್ ಕೆಲಸ ಮಾಡುತ್ತಿದ್ದ. ನಾನು ನಾಗರಾಜನನ್ನು ಭೇಟಿ ಮಾಡುತ್ತಿದ್ದೆ. ನವೀನ ಉಗರಗೋಳ ಮತ್ತು ಮಲ್ಲಿಕಾರ್ಜುನ ನನ್ನ ಜೊತೆ ಸಂಪರ್ಕ ಇರಲಿಲ್ಲ , ಆದರೆ ನಾಗರಾಜನ ಜೊತೆ ಸಂಪರ್ಕದಲ್ಲಿದ್ದರು. ನಾನು , ನಾಗರಾಜ ಇಬ್ಬರೂ ಕಾಲೇಜ ಸಮಯದಲ್ಲಿ ಭೇಟಿ ಮಾಡಿ ಟೀ , ಕಾಫಿ ತೆಗೆದುಕೊಳ್ಳುತ್ತಿದ್ದೆವು ಮತ್ತು ಊಟ ಕೂಡ ಮಾಡುತ್ತಿದ್ದೆವು.

2. ನಾಗರಾಜ, ಮಲ್ಲಿಕಾರ್ಜುನನಿಗೆ 1 ಲಕ್ಷ ರೂ ಹಣ ಕೊಟ್ಟಿದ್ದ. ಅದರ ಸಲುವಾಗಿ ಬಾಂಡ್ ಕೂಡ ಆಗಿತ್ತು. ತನ್ನ ತಂಗಿ ಮದುವೆಗಾಗಿ 1 ಲಕ್ಷ ರೂ. ಹಣ ಮಲ್ಲಿಕಾರ್ಜುನ ನಾಗರಾಜನಿಂದ ಪಡೆದಿದ್ದ. ನಾಗರಾಜ ವಾಪಸು ಕೊಡಲು ಕೇಳಿದರೂ ಮಲ್ಲಿಕಾರ್ಜುನ ಅದನ್ನು ವಾಪಸು ಕೊಡಲು ತಪ್ಪಿಸುತ್ತಿದ್ದ ಎಂದು ನಾಗರಾಜ ಹೇಳಿದಾಗ ನನಗೆ ಗೊತ್ತಾಯಿತು. ಅವರಿಬ್ಬರ ನಡುವೆ ಈ ಬಗ್ಗೆ ಸಣ್ಣಪುಟ್ಟ ಜಗಳ ಆಗಿತ್ತು. ಅದಲ್ಲದೇ ಜಯನಗರ ಕ್ರಾಸನಲ್ಲಿ ಕೂಡ ಜಗಳ ಆಗಿತ್ತು. ಆಗ ಆ ಜಗಳ ನಾನೇ ಬಿಡಿಸಿದ್ದೆ. ನಂತರ ದುಡ್ಡು ಸಿಗದೇ ಇದ್ದಾಗ ನಾಗರಾಜ ಮಲ್ಲಿಕಾರ್ಜುನನ ಮನೆಗೆ ಹೋಗಿದ್ದ. ಅಲ್ಲಿ ಮಲ್ಲಿಕಾರ್ಜುನನು ವಾಪಸು ಹಣ ಕೊಡಲಿಲ್ಲ. ಆ ರೀತಿ ನಾಗರಾಜ ಅವರ ಮನೆಗೆ ಹೋದಾಗ ಮಲ್ಲಿಕಾರ್ಜುನ ಮತ್ತು ಅವನ ತಾಯಿ ಮನೆಯಲ್ಲಿದ್ದರು. ಆಗ ನಾನು ನಾಗರಾಜ ಜೊತೆ ಹೋಗಿರಲಿಲ್ಲ ಆದರೆ ನಾಗರಾಜ ಈ ವಿಚಾರ ನನಗೆ ಹೇಳಿದ. ಆ ರೀತಿ ಹಣ ಕೊಡದೆ ಇದ್ದಾಗ ನಾಗರಾಜ ಸ್ವಲ್ಪ ಬಾಯಿ ಮಾಡಿದ ನನ್ನ ಹಣ ಕೊಡು ಎಂದು ಮಲ್ಲಿಕಾರ್ಜುನನನ್ನು ಕೇಳಿದ.

3. ದಿಃ 26-7-2019 ರಂದು ಮುಂಜಾನೆ 10 ವರೆ ಘಂಟೆಗೆ ನನಗೆ ಶಾಂತಿನಿಕೇತನ ಕಾಲೋನಿಯಲ್ಲಿ ನಾಗರಾಜ ನನ್ನನ್ನು ಭೇಟಿ ಮಾಡಿದ. ಆಗ ನಾಗರಾಜ ಮಲ್ಲಿಕಾರ್ಜುನ ಹಣ ಕೊಡುತ್ತಿಲ್ಲ ಇವತ್ತು ಕೊಡುತ್ತೇನೆ ಎಂದು ಹೇಳಿದ್ದಾನೆಂದು ಹೇಳಿ ಹೋದ. 3 ಘಂಟೆ 20 ನಿಮಿಷಕ್ಕೆ ನಾನು ಮತ್ತು ಸಂತೋಷ ಊಟ ಮಾಡಲು ನಾಗರಾಜಗೆ ಕಾಲ್ ಮಾಡಿದೆವು. ಆಗ ನಾಗರಾಜ ಮಲ್ಲಿಕಾರ್ಜುನ ರೊಕ್ಕ ಕೊಡುತ್ತೇನೆ ಎಂದು ಹೇಳಿದ್ದಾನೆ , ತೆಗೆದುಕೊಂಡು ಬರುತ್ತೇನೆ , ನಾನು ಜಯನಗರ ಕಡೆ ಇದ್ದೇನೆ , ಮಲ್ಲಿಕಾರ್ಜುನ ಕೂಡ ಜಯನಗರ ಕ್ರಾಸನಲ್ಲೇ ಇದ್ದಾನೆ ಎಂದು ನನಗೆ ಹೇಳಿದ. ಅವನ ಬಳಿ ಹಣ ಪಡೆದುಕೊಂಡು ಬರುತ್ತೇನೆಂದು ನನಗೆ ಹೇಳಿದ. ಅದಾದ ಸ್ವಲ್ಪ ಸಮಯದ ನಂತರ ನಾನು ಮತ್ತು ಸಂತೋಷ ಹಲವು ಬಾರಿ ಫೋನ ಕಾಲ್ ಮಾಡಿದಾಗ ನಾಗರಾಜನ ಫೋನ್ ಸ್ವಿಚ್ ಆಫ್ ಆಗಿತ್ತು. ನಾನು ಮತ್ತು ಸಂತೋಷ ಅವನು ಬರಲಿಲ್ಲ ಎಂದು ನಾವೇ ಕೆ ಸಿ ಡಿ ಮುಂದೆ ಶಿವಸಾಗರ ಹೊಟೇಲ್ ನಲ್ಲಿ ಊಟ ಮಾಡಿ ನಮ್ಮ ಮನೆಗೆ ಹೋದೆವು. ಮಾರನೇ ದಿವಸ ಪಬ್ಲಿಕ್ ನಿಂದ ಗೊತ್ತಾಯಿತು ನಾಗರಾಜ ಮನೆಗೆ ಬಂದಿಲ್ಲ ಎಂದು ಗೊತ್ತಾಯಿತು. ನನಗೂ ಮತ್ತು ನಾಗರಾಜನಿಗೂ

ಕೂಡ ಹಣದ ವ್ಯವಹಾರ ಇತ್ತು ಅದರಿಂದ ಅವರ ಮನೆಯವರು ಸಂಶಯದ ಮೇಲೆ ನನ್ನ ಮೇಲೆ ಮತ್ತು ಮಲ್ಲಿಕಾರ್ಜುನ ಮೇಲೆ ಮತ್ತು ಇನ್ನು ಕೆಲವರ ಮೇಲೆ ದೂರು ಕೊಟ್ಟಿದ್ದರು. ನಂತರ 3-4 ದಿವಸದ ನಂತರ ಮಲ್ಲಿಕಾರ್ಜುನ ಮತ್ತು ಅವನ ಸ್ನೇಹಿತರಾದ ನವೀನ ಮತ್ತು ರಾಕೇಶ ಕೆ ಯು ಡಿ ಕಾಲೇಜ್ ಬಳಿ ನಾಗರಾಜನನ್ನು ಖಾರದ ಪುಡಿ ಉಗ್ಗಿ ಮರ್ಡರ್ ಮಾಡಿದ್ದಾರೆ ಎಂದು ಗೊತ್ತಾಯಿತು. ಮಲ್ಲಿಕಾರ್ಜುನ ಮತ್ತು ನಾಗರಾಜ ನಡುವೆ ಹಣದ ವ್ಯವಹಾರ ಇತ್ತು ಮತ್ತು ಮಲ್ಲಿಕಾರ್ಜುನ ತಂಗಿ ಸಂಬಂಧ ಮಲ್ಲಿಕಾರ್ಜುನ 1 ಲಕ್ಷ ರೂ ನಾಗರಾಜನ ಬಳಿ ತೆಗೆದುಕೊಂಡಿದ್ದ, ಆ ಕಾರಣಕ್ಕಾಗಿ ಕೇಳಿದರೂ ವಾಪಸು ಕೊಡಲಿಲ್ಲ ಎಂದು ನಂತರ ಆ ರೊಕ್ಕ ವಾಪಸು ಕೊಡಬಾರದು ಎಂಬ ಕಾರಣಕ್ಕಾಗಿ ಈ ಕೊಲೆ ಮಾಡಿದರು ಎಂದು ಗೊತ್ತಾಯಿತು. ನಾನು ನಾಗರಾಜನಿಂದ ಪಡೆದುಕೊಂಡ ಹಣ ವಾಪಸು ಕೊಟ್ಟಿದ್ದೆ. ಇದಕ್ಕೆ ಸಂಬಂದಪಟ್ಟ ಹಾಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ , ನಾನು ಅವರಿಗೆ ಹೇಳಿದ್ದೇನೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಮಧ್ಯಾಹ್ನ 3 ಘಂಟೆಗೆ ಮುಂದೂಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(**ಬಿ. ಎಸ್. ಭಾರತಿ** )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

ಎಸ್.ಸಿ. ಸಂಖ್ಯೆ 79/2022
ಫ್ರಾಸಾ 5/ ಚಾಸಾ- 16

**<u>ಸಾಕ್ಷಿಯನ್ನು ಮಧ್ಯಾಹ್ನ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟಿ ಸವಾಲು 1 ನೇ ಆರೋಪಿ ಪರ ಶ್ರೀ ಎ ವಿ ಇ ವಕೀಲರಿಂದಃ</u>**

4. ನಾನು ಮತ್ತು ಮಲ್ಲಿಕಾರ್ಜುನ ಹೈಸ್ಕೂಲನಲ್ಲಿ ಒಟ್ಟಿಗೆ ಓದಿದ್ದರಿಂದ ಆವಾಗಿನಿಂದ ಪರಿಚಯ. ನಾವಿಬ್ಬರೂ 8 ರಿಂದ 10 ನೇ ತರಗತಿಯವರೆಗೆ ಮಾತ್ರ ಒಟ್ಟಿಗೆ ಓದಿದ್ದೇವೆ. ನಾನು ಬಿ.ಎಡ್ ಮಾಡಿದ್ದೇನೆ. ನನ್ನ ಸ್ವಂತ ವ್ಯಾಪಾರ ಇದೆ. ಈ ಕೇಸಿನ ದೂರುದಾರರಾದ ರಾಕೇಶ ಹರಪನಹಳ್ಳಿಯವರ ಮುಖ ಪರಿಚಯ ಇದೆ. ಈ ಪ್ರಕರಣ ನಾನು ನೋಡಿಲ್ಲ , ಆದರೆ ನನಗೆ ಹೇಳಿದ್ದಾರೆ. ನಾನು ಮತ್ತು ನಾಗರಾಜ ಇಬ್ಬರೂ ಕಾಲೇಜಲ್ಲಿ ಓದುತ್ತಿದ್ದಾಗ ನನ್ನ ಕಡೆ 500 ರೂ ಕಡಿಮೆ ಇದ್ದರೆ ಅವರ ಬಳಿ ತೆಗೆದುಕೊಳ್ಳುತ್ತಿದ್ದೆ , ಅವರ ಬಳಿ ಕಡಿಮೆ ಇದ್ದಾಗ ನಾನು ಕೊಡುತ್ತಿದ್ದೆ. ನನಗೆ ಆರೋಪಿ ಎನು ಮಾಡಿದ್ದಾರೆಂದು ಗೊತ್ತಿಲ್ಲ ಆದರೂ ಕೂಡ ದೂರುದಾರರು ಹೇಳಿರುವುದರಿಂದ ಈ ದಿನ ಬಂದು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**2 ಮತ್ತು 3 ನೇ ಆರೋಪಿ ಪರ ವಕೀಲರು ಇದೇ ಪಾಟಿ ಸವಾಲು ಅಳವಡಿಸಿಕೊಂಡಿದ್ದಾರೆ.**

ಮರುವಿಚಾರಣೆಃ ಇಲ್ಲ

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(**ಬಿ. ಎಸ್. ಭಾರತಿ** )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.